168

ಮೈಸೂರ ಗಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 19, ಸನ್ 1907.

II ನೆ ಭಾಗ

ಇಂಡ್ಯೂಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆರೀರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್‌ನಾಮೆ.

ತಾರೀಖು 15ನೆ ಡಿಸಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಪಡಿಸುವದೇನಂದರೆ, ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕಿನ 170 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಸಾಗರ ಮೊಕ್ಕಾಂನಲ್ಲಿ ಬರುವ ತಿಂಗಳ (ಜನವರಿ 1908) 20ನೆ ಸೋಮವಾರ ಅಥವಾ ಆ ಪುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ರಾಮರಾವ್,
ಸೂಪರಿಂಟೆಂಡೆಂಟ್, ಮೈಸೂರ ರೆವಿನ್ಯೂ ಸರ್ವೆ.

ಆಬ್ಕಾರಿ ಇಲಾಖೆ.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 27ನೆ ನವೆಂಬರ್ 1907, ಮೈಸೂರು.

ಈ ಕೆಳಗೆ ಕಾಣಿಸಿರುವ ಇನಾಂ ವಗೈರೆ ಗ್ರಾಮಗಳ ಮೂನ್ಯದಾರ್‌ಗೆ ಆಯಾ ಗ್ರಾಮದ ಕೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಆಯಾ ಗ್ರಾಮದ ಸದರಿಗೆ ಕಾಣಿಸಿರುವ ತಾರೀಖಿನ ದಿನ ವಿಚಾರಣೆ ನಡಿಸಲ್ಪಡುತ್ತೆ.

ಆಯಾ ಗ್ರಾಮಕ್ಕೆ ಸಮ್ಬಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಕ್ರಮವಾದ ಮೊಖ್ತಾರ್ ನಾಮೆ ಹೊಂದಿದವರಾಗಲೀ ಹಕ್ಕು ಸ್ಥಾಪಿಸುವದಕ್ಕೆ ಅವಶ್ಯವಾದ ಸನ್ನದು, ಇನಾಂಸೆಟಲ್‌ಮೆಂಟ್ ರಿಜಸ್ತರ ಕಾಪಿ, ಟೈಟಲ್ ಡೀಡು, ಮುಚ್ಚಳಿಕೆಗಳೇ ಮುಂತಾದ ವಿಶಿಷ್ಟ ದಾಖಲೆಗಳ ಸಹಿ ಹೀರಿಂಗ್ ತಾರೀಖು ದಿವಸ ಮೈಸೂರಲ್ಲಿ ನಮ್ಮ ಆಫೀಸು ಬಳಿ ಹಾಜರಾಗತಕ್ಕದ್ದು.

ಹಾಗೆ ಹಾಜರಾಗದೇ ತಪ್ಪಿದ್ದಲ್ಲಿ ರೂಲ್ಸು ಮೇರೆ ಎಕ್ಸ್‌ಪಾರ್ಟಿ ಫೈಸಲ್ಮಾಡುತ್ತೇವಾಗಿ ಈ ಮೂಲಕ ತಿಳಿಸಿದೆ.

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಎಡತೊರೆ ..	ಅರಕೆರೆ ಕೊಪ್ಪಲ್ ...	1908ನೆ ಜನವರಿ ತಾ॥ 3.
ಡಿಟೋ ..	ಕಲ್ಲೇನಹಳ್ಳಿ ಕೊಪ್ಪಲ್ ...	
ಡಿಟೋ ..	ಚಾಮಲಾಪುರ ...	
ಡಿಟೋ ..	ಕಲ್ಲಹಳ್ಳಿ ...	
ಡಿಟೋ ..	ವಡ್ಡರಹಳ್ಳಿ ...	
ಡಿಟೋ ...	ಮೆಟ್ಟುಕೆರೆ	1908ನೆ ಜನವರಿ ತಾ॥ 4.
ಡಿಟೋ ...	ಹೊಸೂರು	
ಡಿಟೋ ..	ಯರವನುಗಾನಹಳ್ಳಿ	
ಡಿಟೋ ...	ಗುಡಗಹಳ್ಳಿ	